ಜೆಎಸ್‌ಎಸ್ ಮಹಾವಿದ್ಯಾಪೀಠ
**ಜೆಎಸ್‌ಎಸ್ ಮಹಿಳಾ ಕಾಲೇಜು (ಸ್ವಾಯತ್ತ)**
(An Autonomous College of University of Mysore: Re - Accredited by NAAC at 'A' Grade with CGPA of 3.07)
**ಸರಸ್ವತಿಪುರಂ, ಮೈಸೂರು – 570 009**
ದೂರವಾಣಿ: (ಕಛೇರಿ) 0821- 2548239 ♣ (ಪ್ರಾಂ) 0821- 2548383 ♣ ಫ್ಯಾಕ್ಸ್: 0821-2548240
ಇ–ಮೇಲ್: jsscw.principal@gmail.com ♣ ವೆಬ್‌ಸೈಟ್ http://www.jsscw.in

ಕ್ರಮ ಸಂಖ್ಯೆ: ಜೆಎಸ್‌ಎಸ್‌ಮಕಾ/ /2024–25 ದಿನಾಂಕ: 06.01.2025

**'ಮನುಷ್ಯ ವ್ಯಕ್ತಿತ್ವದ ಭಾರವನ್ನು ಕಳಚಿದಾಗ ಆತನಿಗೆ ಸುಖ'**

**ಶ್ರೀ ಲಕ್ಷ್ಮೀಶ ತೋಳ್ಪಾಡಿ**

ದಿನಾಂಕ 6.01.2025ರಂದು ಜೆಎಸ್‌ಎಸ್ ಮಹಿಳಾ ಕಾಲೇಜು [ಸ್ವಾಯತ್ತ] ಸರಸ್ವತಿಪುರಂ, ಮೈಸೂರು ಇಲ್ಲಿನ ನವಜ್ಯೋತಿ ಸಭಾಂಗಣದಲ್ಲಿ ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತರಾದ ಶ್ರೀ ಲಕ್ಷ್ಮೀಶ ತೋಳ್ಪಾಡಿಯವರು 'ಜೀವನ ಮೌಲ್ಯಗಳು' ವಿಷಯ ಕುರಿತು ಉಪನ್ಯಾಸ ನೀಡುತ್ತಾ, ನಾವು ಕೇಳುವ ಸ್ಪಂದಿಸುವ ಕ್ರಿಯೆಯೇ ಜೀವನ. ಇದು ಮೌಲಿಕವಾಗಿರಬೇಕು. ನೈಜವಾಗಿ ಮಾತನಾಡುವುದೇ ಮೌಲ್ಯ. ಹನ್ನೆರಡನೆಯ ಶತಮಾನದ ಶಿವಶರಣರು ಸಾರಿದ ಬದುಕಿನ ಮೌಲ್ಯಗಳು ಸಾರ್ವಕಾಲಿಕವಾದವು. ಶರಣರು ನಡೆ–ನುಡಿ ಸಿದ್ಧಾಂತವನ್ನು ಅನುಸರಿಸಿದರು. ಮಾತಿನ ಮಹತ್ವ ತಿಳಿಸುತ್ತಾ, ವಚನಕ್ಕೆ ಮನಸ್ಸು ನಾಚಬೇಕು, ಮನಸ್ಸಿಗೆ ಮಾತು ನಾಚಬೇಕು ಆಗ ಮಾತ್ರ ಬದುಕಿಗೆ ಅರ್ಥ ಬಂದಂತಾಗುತ್ತದೆ ಎಂದು ತಿಳಿಸಿದರು. ಕೃತಕ ಬುದ್ಧಿಮತ್ತೆಯ ಬಗ್ಗೆ ಪ್ರಸ್ತಾಪಿಸುತ್ತ ವರ್ತಮಾನ ಮತ್ತು ಭವಿಷ್ಯತ್ತಿನ ವಿಷಯ ಭಂಡಾರವೆನಿಸಿದ ಕೃತಕ ಬುದ್ಧಿಮತ್ತೆಯನ್ನು ಎಷ್ಟು ಸಮರ್ಪಕವಾಗಿ ಬಳಸಿಕೊಳ್ಳುತ್ತೇವೆ ಎಂಬುದು ಮುಖ್ಯವಾಗಬೇಕು.

ಮನುಷ್ಯ ವ್ಯಕ್ತಿತ್ವದ ಭಾರವನ್ನು ಕಳಚಿದಾಗ ಆತನಿಗೆ ಸುಖ ದೊರೆಯುತ್ತದೆ. ಬಹುತೇಕ ನಮ್ಮ ಸಮಸ್ಯೆಗಳಿಗೆ ನಾವೇ ಕಾರಣರಾಗಿರುತ್ತೇವೆ. ಇತರರನ್ನು ಅರ್ಥ ಮಾಡಿಕೊಂಡು ಬದುಕುವುದರಲ್ಲಿ ನೆಮ್ಮದಿಯಿದೆ. ಯಾವುದರಲ್ಲಿ ಜೀವವಿದೆಯೋ ಅದೇ ಆಧ್ಯಾತ್ಮ ಎಂದು ತಿಳಿಸಿದರು. ಉಪನ್ಯಾಸದ ನಂತರ ವಿದ್ಯಾರ್ಥಿನಿಯರು ಹಾಗೂ ಅಧ್ಯಾಪಕರ ಪ್ರಶ್ನೆಗಳಿಗೆ ಉತ್ತರಿಸಿದರು. ಕಾರ್ಯಕ್ರಮದ ಆರಂಭದಲ್ಲಿ ನಾಡಿನ ಹಿರಿಯ ಸಾಹಿತಿ ನಾ. ಡಿಸೋಜ ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಕಾರ್ಯಕ್ರಮದಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠ ಪ್ರಕಟಣಾ ವಿಭಾಗದ ನಿರ್ದೇಶಕರಾದ ಪ್ರೊ ಮೊರಬದ ಮಲ್ಲಿಕಾರ್ಜುನರವರು, ಕಾಲೇಜು ಶಿಕ್ಷಣ ವಿಭಾಗದ ಸಹಾಯಕ ನಿರ್ದೇಶಕರಾದ ಶ್ರೀ ಬಿ. ನಿರಂಜನಮೂರ್ತಿರವರು, ಹಿರಿಯ ಸಾಹಿತಿಗಳಾದ ಶ್ರೀ ಕೆ. ಸಿ. ಶಿವಪ್ಪನವರು, ಶರಣ ಸಂಸ್ಕೃತಿ ಚಿಂತಕರಾದ ಶೀ ಶಂಕರ ದೇವನೂರುರವರು, ಪದವಿ ಕಾಲೇಜಿನ ಪ್ರಾಚಾರ್ಯರಾದ ಡಾ. ರೇಚಣ್ಣನವರು, ಪರೀಕ್ಷಾ ನಿಯಂತ್ರಣಾಧಿಕಾರಿಗಳಾದ ಶ್ರೀ ಎಂ. ಎಂ. ಸ್ವಾಮಿರವರು, ಅಧ್ಯಾಪಕರು ಹಾಗೂ ವಿದ್ಯಾರ್ಥಿನಿಯರು ಉಪಸ್ಥಿತರಿದ್ದರು. ಕನ್ನಡ ವಿಭಾಗದ ಮುಖ್ಯಸ್ಥರಾದ ಶ್ರೀ ಆರ್. ಎಸ್. ಕುಮಾರ್ ಕಾರ್ಯಕ್ರಮ ನಡೆಸಿಕೊಟ್ಟರು.

ಪ್ರಾಂಶುಪಾಲರು